ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:ಸಿ7[2]ಪ್ರಾ.ಶಿ.ಅ:ಹೊ.ಶಾ.ನೋಂ:10/2021-22 ದಿನಾಂಕ: 12-10-2022

: ಸುತ್ತೋಲೆ :

ವಿಷಯ: 2022-23ನೇ ಸಾಲಿಗೆ ಹೊಸ ಶಾಲೆಗಳ ನೋಂದಣಿಗಾಗಿ ಅರ್ಜಿಗಳನ್ನು ಅಹ್ವಾನಿಸಿದ್ದು, ಅಂತಿಮ ದಿನಾಂಕವನ್ನು ವಿಸ್ತರಣೆ ಮಾಡಿದ ಬಗ್ಗೆ.

ಉಲ್ಲೇಖ: 1. ದಿನಾಂಕ:14-09-2022ರ ಸಭೆಯ ನಡಾವಳಿ.

2. ಸರ್ಕಾರದ ಪತ್ರದ ಸಂಖ್ಯೆ:ಇಪಿ:76:ಪಿಜಿಸಿ:2022,ದಿನಾಂಕ:10-10-2022

% % % % %

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2022-23ನೇ ಸಾಲಿಗೆ ಹೊಸ ಶಾಲೆಗಳನ್ನು ನೋಂದಾಯಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಹಾಗೂ ಈ ಅವಧಿಯಲ್ಲಿ ಸಲ್ಲಿಸಿದ ಅರ್ಹ ಅರ್ಜಿಗಳನ್ನು ಪರಿಶೀಲಿಸಿ ಅಂತಿಮಗೊಳಿಸಲಾಗಿದೆ.

ಆದರೆ ಸರ್ಕಾರವು ಉಲ್ಲೇಖ೨ರ ಸರ್ಕಾರದ ಪತ್ರದ ಜೊತೆಯಲ್ಲಿ ಲಗತ್ತಿಸಿರುವ ನಡಾವಳಿಯಲ್ಲಿ ಈ ಕೆಳಕಂಡಂತೆ ತೀರ್ಮಾನಿಸಲಾಗಿರುತ್ತದೆ.

1. ಹೊಸ ಶಾಲೆಗಳನ್ನು ನೋಂದಣಿ ಮಾಡುವಾಗ ಕಡ್ಡಾಯವಾಗಿ ಶಾಲೆಯನ್ನು ಪ್ರಾರಂಭಿಸುವ ಉದ್ದೇಶಿತ ಸ್ಥಳವು ಗ್ರಾಮಠಾಣಾ, ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯಿಂದ ಹೊರತುಪಡಿಸಿದ ಜಮೀನು ಶೈಕ್ಷಣಿಕ ಉದ್ದೇಶಕ್ಕಾಗಿ ಎಂದು ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮತಿ ಪಡೆದು ಜಿಲ್ಲಾಧಿಕಾರಿಗಳಿಂದ ಭೂ-ಪರಿವರ್ತನೆ ಹೊಂದಿರಬೇಕು.

2. ಸರ್ಕಾರ ಅಥವಾ ಖಾಸಗಿಯವರು ಅನುಮೋದನೆ ಪಡೆದ ಬಡಾವಣೆಯಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿಟ್ಟಿರುವ ನಿವೇಶನ (CA Site)ದಲ್ಲಿ ಯಾವ ಹಂತದ ವರೆಗಿನ ಶಾಲೆಗೆ ಅನುಮತಿ ನೀಡಿರುವ ಬಗ್ಗೆ ಸೂಕ್ತ ಆದೇಶವನ್ನು ಪಡೆದು ನಿರ್ಮಿಸಿದ್ದಲ್ಲಿ

3. ನಗರ ಮತ್ತು ಪಟ್ಟಣ ಪ್ರದೇಶದ ವ್ಯಾಪ್ತಿಯಲ್ಲಿ ಯೋಜನಾ ಪ್ರದೇಶದ ಮಹಾ ಯೋಜನಾ ನಕ್ಷೆಯಲ್ಲಿ ವಸತಿ ಅಥವಾ ವಾಣಿಜ್ಯ ಉದ್ದೇಶಕ್ಕಾಗಿ ಕಾಯ್ದಿರಿಸಿರುವ ಪ್ರದೇಶದಲ್ಲಿ ಶೈಕ್ಷಣಿಕ ಉದ್ದೇಶಕ್ಕಾಗಿ ಕಟ್ಟಡವನ್ನು ನಿರ್ಮಿಸಲು ವಲಯ ನಿಯಮಾವಳಿಗಳಲ್ಲಿ ಅವಕಾಶವಿರುವಂತಹ ನಗರ, ಪಟ್ಟಣ ಸ್ಥಳೀಯ / ಸಕ್ಷಮ ಪ್ರಾಧಿಕಾರದಿಂದ ಅನುಮೋದಿತ ಖಾತೆ ಹೊಂದಿದ್ದು, ಶಾಲೆಯ ಉಪಯೋಗಕ್ಕಾಗಿ ಸಕ್ಷಮ ಪ್ರಾಧಿಕಾರವು ಕಟ್ಟಡ ನಕ್ಷೆಯ ಅನುಮೋದನೆ ನೀಡಿದ್ದಲ್ಲಿ.

4. ಸದರಿ ಸ್ಥಳವು ಈಗಾಗಲೇ ನಗರ / ಪಟ್ಟಣ **City Title Survey Number**ಅಥವಾ ಖಾತೆಯನ್ನು ಹೊಂದಿದ್ದಲ್ಲಿ ಸ್ಥಳೀಯ ಪ್ರಾಧಿಕಾರವು ಶಾಲೆ ನಡೆಸುವ ಉದ್ದೇಶಿತ ಸ್ಥಳದಲ್ಲಿ ಶಾಲಾ ಕಟ್ಟಡವನ್ನು ಕಟ್ಟಲು ಅನುಮತಿ ನೀಡಿ, ನಕ್ಷೆಯನ್ನು ಅನುಮೋದನೆ ನೀಡಿದ್ದಲ್ಲಿ

5. ಗ್ರಾಮ ಠಾಣಾ ವ್ಯಾಪ್ತಿಯಲ್ಲಿ ಖಾತೆ ಸಂಖ್ಯೆ ಹೊಂದಿದ್ದು, ಸ್ಥಳೀಯ ಪ್ರಾಧಿಕಾರವು ಶಾಲೆ ನಡೆಸುವ ಉದ್ದೇಶಿತ ಸ್ಥಳದಲ್ಲಿ ಶಾಲಾ ಕಟ್ಟಡವನ್ನು ಕಟ್ಟಲು ಅನುಮತಿ ನೀಡಿ, ನಕ್ಷೆಯನ್ನು ಅನುಮೋದನೆ ನೀಡಿದ್ದಲ್ಲಿ

1 ರಿಂದ 5 ರವರೆಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅಂತಹ ಸ್ಥಳದಲ್ಲಿ ಹೊಸ ಶಾಲೆಗಳಿಗೆ ಅರ್ಜಿ ಸಲ್ಲಿಸಿದಲ್ಲಿ ಅನುಮತಿ ನೀಡಬಹುದಾಗಿರುತ್ತದೆ ಎಂದು ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

ಆದರೆ, ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆಯಲ್ಲಿ ಬರುವ ಮತ್ತು ಗ್ರಾಮ ಠಾಣಾ ವ್ಯಾಪ್ತಿಯ ಪ್ರದೇಶದಲ್ಲಿ ಖಾತೆಗಳನ್ನು ಹೊಂದಿರುವ ಸ್ಥಳಗಳನ್ನು ಹೊರತುಪಡಿಸಿ, ಕೃಷಿ, ವಾಣಿಜ್ಯ, ವಾಸಕ್ಕೆ, ಕೈಗಾರಿಕೆಗೆ ಹಾಗೂ ಇತರೆ ಉದ್ದೇಶಗಳಿಗೆ ಭೂ ಪರಿವರ್ತನೆ ಹೊಂದಿದ ಇಂತಹ ಸ್ಥಳದಲ್ಲಿ ಶಾಲೆಗಳನ್ನು ಪ್ರಾರಂಭಿಸಲು ನೋಂದಣಿಗಾಗಿ ಅರ್ಜಿ ಸಲ್ಲಿಸಿದ್ದಲ್ಲಿ ಇಂತಹ ಶಾಲೆಗಳಿಗೆ ನೋಂದಣಿ ಮಾಡಲು ಅವಕಾಶ ಇಲ್ಲವೆಂದು ತೀರ್ಮಾನಿಸಲಾಗಿರುತ್ತದೆ.

ಆದುದರಿಂದ 2022-23ನೇ ಸಾಲಿಗೆ ಹೊಸ ಶಾಲೆಗಳನ್ನು ನೋಂದಣಿ ಮಾಡಲು ಆಸಕ್ತ ಆಡಳಿತ ಮಂಡಳಿಗಳು ಹೊಸದಾಗಿ ಹಾಗೂ ಈಗಾಗಲೇ ತಿರಸ್ಕೃತಗೊಂಡಿರುವ ಅರ್ಜಿಗಳ ಆಡಳಿತ ಮಂಡಳಿಗಳು ಸಹಾ ಪುನಃ ಅರ್ಜಿ ಸಲ್ಲಿಸಲು ದಿನಾಂಕ: 15-10-2022 ರಿಂದ 22-10-2022 ರವರೆಗೆ ಅವಕಾಶ ನೀಡಲಾಗಿದೆ.

ಶೈಕ್ಷಣಿಕ ವರ್ಷದ ಮಧ್ಯಂತರಕ್ಕೆ ಬಂದಿರುವುದರಿಂದ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಹೊಸ ಶಾಲೆಗಳ ಅರ್ಜಿಗಳನ್ನು ಅತ್ಯಂತ ಶೀಘ್ರವಾಗಿ ಇತ್ಯರ್ಥಪಡಿಸಬೇಕಾಗಿರುವುದರಿಂದ ವಿವಿಧ ಕಛೇರಿ ಹಂತದಲ್ಲಿ ಪರಿಶೀಲನೆ ನಿರ್ವಹಿಸುವ ಕರ್ತವ್ಯದ ಅವಧಿಯನ್ನು ಎರಡು ದಿನಗಳಿಗೆ ಸೀಮಿತಗೊಳಿಸಲಾಗಿದೆ. ನಿಗಧಿತ ಅವಧಿಯೊಳಗೆ ಅರ್ಜಿಗಳನ್ನು ಕಡ್ಡಾಯವಾಗಿ ಇತ್ಯರ್ಥಪಡಿಸಿವುದು.

ಈ ಕೆಳಕಂಡಂತೆ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿದ್ದು, ನಿಗಧಿಪಡಿಸಿದ ವೇಳಾ ಪಟ್ಟಿಯಂತೆ ಕ್ರಮವಹಿಸಲು ಸೂಚಿಸಿದೆ.

*: ಪರಿಷ್ಕೃತ ವೇಳಾ ಪಟ್ಟಿ :*

| ಕ್ರ.ಸಂ | ವಿಷಯ | ದಿನಾಂಕ |
|---|---|---|
| 1. | ಅರ್ಹ ನೋಂದಾಯಿತ ಸಂಸ್ಥೆಗಳು 2022-23ನೇ ಸಾಲಿಗೆ ಹೊಸ ಶಾಲೆಗಳ ನೋಂದಣಿಗಾಗಿ / ಉನ್ನತೀಕರಿಸುವ ಶಾಲೆಗಳ ನೋಂದಣಿಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ಅವಕಾಶದ ಅಂತಿಮ ದಿನಾಂಕ | 15.10.2022 ರಿಂದ 22.10.2022 |
| 2. | ತಂತ್ರಾಂಶದಲ್ಲಿ ಸ್ವೀಕೃತವಾದ ಅರ್ಜಿಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಲಾಗಿನ್ ಗೆ ಕಳುಹಿಸಲು ನಿಗಧಿಪಡಿಸಿದ ದಿನಾಂಕ | 17.10.2022 ರಿಂದ 24.10.2022 |
| 3. | ಕ್ಷೇತ್ರ ಶಿಕ್ಷಣಾಧಿಕಾರಿಗಳು ಪರಿಶೀಲಿಸಿ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರಿಗೆ ಅರ್ಜಿಯನ್ನು ಆನ್‌ಲೈನ್ ತಂತ್ರಾಂಶದಲ್ಲಿ ಸಲ್ಲಿಸಲು ಕಡೆಯ ದಿನಾಂಕ. | 18.10.2022 ರಿಂದ 27.10.2022 |

| | | |
|---|---|---|
| 4 | ಉಪನಿರ್ದೇಶಕರು ಅರ್ಜಿಗಳನ್ನು ಪರಿಶೀಲಿಸಿ ಅಪೂರ್ಣ ಅರ್ಜಿಗಳನ್ನು ಆಡಳಿತ ಮಂಡಳಿಗೆ ಹಿಂತಿರುಗಿಸಲು ಕಡೆಯ ದಿನಾಂಕ | 18.10.2022 ರಿಂದ 28.10.2022 |
| 5 | ಆಡಳಿತ ಮಂಡಳಿಗಳು ಅರ್ಜಿಗಳನ್ನು ಸರಿಪಡಿಸಿ ಉಪನಿರ್ದೇಶಕರಿಗೆ ಹಿಂತಿರುಗಿಸಲು ಕಡೆಯ ದಿನಾಂಕ | 19.10.2022 ರಿಂದ 30.10.2022 |
| 6. | ಸಂಬಂಧಿಸಿದ ಉಪನಿರ್ದೇಶಕರ ಕಛೇರಿಗಳಲ್ಲಿ ಹೊಸ ಶಾಲೆಗಳ ನೋಂದಣಿ / ಉನ್ನತೀಕರಿಸುವ ಶಾಲೆಗಳ ನೋಂದಣಿ ಅರ್ಜಿಗಳನ್ನು ಆನ್‌ಲೈನ್ ತಂತ್ರಾಂಶದಲ್ಲಿ ಪ್ರಚಲಿತ ನಿಯಮಗಳಂತೆ ಇತ್ಯರ್ಥಪಡಿಸಿ ಮಂಜೂರಾತಿ ಅಥವಾ ತಿರಸ್ಕೃತ ಆದೇಶ ಹೊರಡಿಸಲು ಕಡೆಯ ದಿನಾಂಕ. | 02.11.2022 |

ವಿ.ಸೂ:

- ದಿನಾಂಕ:22.04.2021ರ ನಂತರ ನೋಂದಣಿ ಮತ್ತು ಸಂಸ್ಕರಣಾ ಶುಲ್ಕವನ್ನು ಪಾವತಿಸಿದ ಆಡಳಿತ ಮಂಡಳಿಗಳು ಶುಲ್ಕವನ್ನು ಪಾವತಿಸಿದ ದಿನಾಂಕದಿಂದ 03 ವರ್ಷಗಳವರೆಗೆ ಪರಿಗಣಿಸಲು ನಿಯಮವನ್ನು ತಿದ್ದುಪಡಿ ತಂದಿರುವುದರಿಂದ ದಿನಾಂಕ:22.04.2021ರ ನಂತರ ಪಾವತಿಸಿದ ಚಲನನ್ನು ಮಾತ್ರ ಪರಿಗಣಿಸುವುದು. ಆದ್ದರಿಂದ ಈ ದಿನಾಂಕದ ನಂತರ ಪಾವತಿಸಿದ ಚಲನ್ ನನ್ನು ಮಾತ್ರ ಪುನಃ ಅಪ್‌ಲೋಡ್ ಮಾಡುವುದು.
- ಆಡಳಿತ ಮಂಡಳಿಗಳು ತಂತ್ರಾಂಶದಲ್ಲಿ ಕೋರಿರುವ ಎಲ್ಲಾ ಅಗತ್ಯ ಮಾಹಿತಿಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಈಗಾಗಲೇ ಅರ್ಜಿ ಸಲ್ಲಿಸಿ, ತಿರಸ್ಕೃತವಾಗಿದ್ದಲ್ಲಿ ಯಾವ ಮಾಹಿತಿ ಕೊರತೆಯಿಂದ ತಿರಸ್ಕೃತಗೊಂಡಿರುವುದೋ ಆ ಮಾಹಿತಿಯನ್ನು ಒಳಗೊಂಡಂತೆ ಸಂಪೂರ್ಣ ಪ್ರಸ್ತಾವನೆಯೊಂದಿಗೆ ಪುನರ್ ಸಲ್ಲಿಸಿ, ಅನುಮತಿ ಕೋರುವುದು. ಸದರಿ ಮಾಹಿತಿಯನ್ನು ಸಲ್ಲಿಸದೇ, ಪುನಃ ಹಿಂದಿನಂತೆಯೇ ಅರ್ಜಿ ಸಲ್ಲಿಸಿದ್ದಲ್ಲಿ ಅಂತಹ ಆಡಳಿತ ಮಂಡಳಿಗಳು ಪುನಃ ಅರ್ಜಿ ಸಲ್ಲಿಸಲು ಅವಕಾಶವನ್ನು ನಿರ್ಬಂಧಿಸಲಾಗುವುದು. ಆದ್ದರಿಂದ ಆಡಳಿತ ಮಂಡಳಿಗಳು ಎಲ್ಲಾ ಮಾಹಿತಿಗಳೊಂದಿಗೆ ಅರ್ಜಿಗಳನ್ನು ಕಡ್ಡಾಯವಾಗಿ ಸಲ್ಲಿಸುವುದು.
- **ಆನ್‌ಲೈನ್ ತಂತ್ರಾಂಶದಿಂದ ಸ್ವೀಕೃತವಾದ ಅರ್ಜಿಗಳನ್ನು ಕಛೇರಿಗಳಲ್ಲಿನ ಯಾವುದೇ ಹಂತದಲ್ಲಿ ಎರಡು ದಿನಗಳಿಗಿಂತ ಹೆಚ್ಚು ಉಳಿಸಿಕೊಳ್ಳುವಂತಿಲ್ಲ. ಒಂದು ವೇಳೆ ತ್ರಿಸದಸ್ಯ ಸಮಿತಿ ಸದಸ್ಯರ ವರದಿಯು ಅವಶ್ಯವಿದ್ದಲ್ಲಿ ತ್ವರಿತ ವಿಲೇವಾರಿಗಾಗಿ ಹೆಚ್ಚುವರಿ ತಂಡವನ್ನು ರಚಿಸಿ, ಎರಡು ದಿನಗಳಲ್ಲಿ ವರದಿ ಪಡೆದು ಕ್ರಮವಹಿಸತಕ್ಕದ್ದು, ಎರಡು ದಿನಗಳಿಗಿಂತ ಹೆಚ್ಚು ಅವಧಿ ಒಂದು ಲಾಗಿನ್‌ನಲ್ಲಿ ಇದ್ದಲ್ಲಿ ಅಂತಹ ಲಾಗಿನ್‌ನ ಸಿಬ್ಬಂದಿ / ಅಧಿಕಾರಿಗಳು ಕರ್ತವ್ಯ ನಿರ್ಲಕ್ಷದ ಲೋಪವೆಸಗಿದ್ದಾರೆಂದು ಭಾವಿಸಿ ಅವರುಗಳ ಮೇಲೆ ಸೂಕ್ತ ಶಿಸ್ತುಕ್ರಮ ಜರುಗಿಸಲಾಗುವುದು.**

ಆಯುಕ್ತರು 12/10/2022
ಸಾರ್ವಜನಿಕ ಶಿಕ್ಷಣ ಇಲಾಖೆ.

ಇವರಿಗೆ:

*01.* ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು[ಆಡಳಿತ] ರವರಿಗೆ
*02.* ರಾಜ್ಯದ ಎಲ್ಲಾ ತಾಲ್ಲೂಕು/ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ

*ಪ್ರತಿಯನ್ನು:*

*03.* ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, [ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ] ಇವರ ಆಪ್ತ ಶಾಖೆ, ಇವರಿಗೆ ಕಳುಹಿಸುತ್ತಾ ಮಾನ್ಯ ಪ್ರಧಾನ ಕಾರ್ಯದರ್ಶಿಗಳು [ಪ್ರಾಥಮಿಕ ಮತ್ತು [ಪ್ರೌಢ ಶಿಕ್ಷಣ] ಇವರ ಗಮನಕ್ಕೆ ತರಲು ಕೋರಿದೆ.

*04.* ಅಪರ ಆಯುಕ್ತರು, ಸಾ.ಶಿ.ಇಲಾಖೆ, ಕಲಬುರ್ಗಿ ಮತ್ತು ಧಾರವಾಡ ಇವರಿಗೆ ಕಳುಹಿಸುತ್ತಾ ನಿಯಮಾನುಸಾರ ಕ್ರಮವಹಿಸಲು ತಿಳಿಸಿದೆ.

*05.* ನಿರ್ದೇಶಕರು ಪ್ರಾಥಮಿಕ ಶಿಕ್ಷಣ ಇವರ ಆಪ್ತ ಶಾಖೆಗೆ ಕಳುಹಿಸುತ್ತಾ ನಿರ್ದೇಶಕರ ಗಮನಕ್ಕೆ ತರಲು ತಿಳಿಸಿದೆ.

*06.* ನಿರ್ದೇಶಕರು ಪ್ರೌಢ ಶಿಕ್ಷಣ ಇವರ ಆಪ್ತ ಶಾಖೆಗೆ ಕಳುಹಿಸುತ್ತಾ ನಿರ್ದೇಶಕರ ಗಮನಕ್ಕೆ ತರಲು ತಿಳಿಸಿದೆ.

*07.* ಕಾರ್ಯಕ್ರಮಾಧಿಕಾರಿಗಳು, ಎಸ್.ಎ.ಟಿ.ಎಸ್ ವಿಭಾಗ, ಸಮಗ್ರ ಶಿಕ್ಷಣ ಅಭಿಯಾನ, ಬೆಂಗಳೂರು ಇವರಿಗೆ ಕಳುಹಿಸುತ್ತಾ ಇದರೊಂದಿಗೆ ಲಗತ್ತಿಸಿರುವ ಚೆಕ್‌ಲಿಸ್ಟ್‌ನಂತೆ ತಂತ್ರಾಂಶವನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

*08.* ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ಸುತ್ತೋಲೆಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದಕ್ಕಾಗಿ.

*09.* ಪ್ರೋಗ್ರಾಮರ್, ಸಾಫ್ಟ್‌ವೇರ್ ಡೆವಲಪ್ ಮೆಂಟ್ ಸೆಂಟರ್, ಸಮಗ್ರ ಶಿಕ್ಷಣ ಅಭಿಯಾನ, ಬೆಂಗಳೂರು ಇವರಿಗೆ ಕಳುಹಿಸುತ್ತಾ ಇದರೊಂದಿಗೆ ಲಗತ್ತಿಸಿರುವ ಚೆಕ್‌ಲಿಸ್ಟ್‌ನಂತೆ ತಂತ್ರಾಂಶವನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

*10.* ಕಛೇರಿ ಪ್ರತಿ.